ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

೩ನೇ ವರ್ಷ ೧೧ನೇ ಸಂಚಿಕೆ ಕೊಪ್ಪ ೪-೧೧-೧೯೮೪ ಭಾನುವಾರ ಬೆಲೆ ೪೦ ಪೈಸೆ

ಅಗಲಿದ ಪ್ರಧಾನಿಗೆ ನಮನ: ಅಸಂಖ್ಯ ಜನರ ಅಶ್ರುತರ್ಪಣ

ಕೊಪ್ಪ : ಅಗಲಿದ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ಗೌರವಾರ್ಥ ನ. ೧ ರಂದು ೫ ಸಾವಿರಕ್ಕೂ ಹೆಚ್ಚು ಜನ ಮೌನಮೆರವಣಿಗೆ ನಡೆಸಿ ಮೃತರ ಆತ್ಮಕ್ಕೆ ಶಾಂತಿಕೋರಿದರು

ಕೊಪ್ಪ ತಾ|| ಕಾಂಗ್ರೆಸ್ ಸಮಿತಿ ಏರ್ಪಡಿಸಿದ್ದ ಮೌನ ಮೆರವಣಿಗೆ ಮತ್ತು ಸಂತಾಪ ಸೂಚಕ ಸಭೆಯಲ್ಲಿ ಸಮಾಜದ ಎಲ್ಲ ವರ್ಗಗಳ ಜನ ಸ್ವಯಂ ಪ್ರೇರಣೆಯಿಂದ ಪಾಲುಗೊಂಡರು. ಮೆರವಣಿಗೆ ಸಂಜೆ ನಾಲ್ಕರಿಂದ ಸುಮಾರು ಒಂದೂವರೆ ಗಂಟೆಯಷ್ಟು ಹೊತ್ತು ಹಿಡಿಯಿತು. ಅಷ್ಟೂ ಹೊತ್ತು ಇಡೀ ಪೇಟೆ ನಿಃಶಬ್ದವಾಗಿತ್ತೆಂದರೆ ಅತಿಶಯೋಕ್ತಿಯಲ್ಲ.

ಪುರಭವನದಲ್ಲಿ ನಡೆದ ಸಂತಾಪ ಸೂಚಕ ಸಭೆಯಲ್ಲಿ ೫ ನಿಮಿಷ ಮೌನ ಆಚರಿಸಲಾಯಿತು. ಅನಂತರ ತಾ|| ಬಿಜೆಪಿ ಅಧ್ಯಕ್ಷ ಬಿ.ಎಂ. ರಘುನಾಥ್, ಇಂಟಕ್ ಕಾರ್ಮಿಕ ಮುಖಂಡ ಪಿ. ಪಿ. ಎಸ್. ಮಣಿ, ಮಿಾಗ ಶ್ರೀನಿವಾಸ್ ಮುಂತಾದವರು ಮಾತನಾಡಿದರು.

ದಿವಂಗತ ಪ್ರಧಾನಿಯವರ ನಿಧನಕ್ಕೆ ಸಂತಾಪ ಸೂಚಿಸುವ ಹಾಗೂ ಅವರ ಕ್ರೂರ ಹತ್ಯೆಯನ್ನು ಖಂಡಿಸುವ ನಿರ್ಣಯವನ್ನು ಸಭೆಯಲ್ಲಿ ಓದಿದ ನಂತರ ಅವರ ಕುಟುಂಬದವರಿಗೆ ಕಳಿಸಿ ಕೊಡಲಾಯಿತು.

"ಇಂದಿರಾ ಸಮಸ್ಯೆಯೂ ಅಲ್ಲ, ಅವರ ಹತ್ಯೆ ಸಮಸ್ಯೆಗೆ ಪರಿಹಾರವೂ ಅಲ್ಲ."

—'ಮುಂಗಾರು', ಮಂಗಳೂರು.

"ಹಿಂಸೆ ತಡೆಯಲು ಬೇಕಾದ ಅಧಿಕಾರ ಹೊಂದಿದ್ದವರು ನಿಷ್ಕ್ರಿಯರಾಗದೆ, ಸಮರ್ಪಕವಾಗಿ ಕಾರ್ಯಪ್ರವೃತ್ತರಾಗಿದ್ದಿದ್ದರೆ ಇಷ್ಟೊಂದು ಸಾವು-ನೋವು ಸಂಭವಿಸುತ್ತಿರಲಿಲ್ಲ."

—ಇಂಡಿಯನ್ ಎಕ್ಸ್‌ಪ್ರೆಸ್

ರಾಜೀವ್ ಪ್ರಧಾನಿ

ಬುಧವಾರ ಸಂಜೆ ರಾಜೀವ್ ಗಾಂಧಿ ತಾತ್ಕಾಲಿಕ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಅನಂತರ ಶನಿವಾರ ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕರಾಗಿ ಆರಿಸಲ್ಪಟ್ಟು ಪ್ರಧಾನಿಯಾಗಿ ಮುಂದುವರಿದಿದ್ದಾರೆ. ಭಾನುವಾರ ಅವರು ಪೂರ್ಣ ಪ್ರಮಾಣದ ಮಂತ್ರಿಮಂಡಳ ರಚಿಸಿದ್ದಾರೆ. ರಾಜ್ಯ ಸಚಿವರು, ಉಪ ಮಂತ್ರಿಗಳು ಸೇರಿ ೪೮ ಜನರಿರುವ (ಪ್ರಧಾನಿ ಒಳಗೊಂಡು) ಸಂಪುಟದಲ್ಲಿ ಬಹುಪಾಲು ಹಿಂದಿನ ಮಂತ್ರಿಗಳೇ ಇದ್ದು, ಹೆಚ್ಚಿನವರು ಹಿಂದಿನ ಖಾತೆ ಮತ್ತು ದರ್ಜೆಗಳನ್ನೇ ಹೊಂದಿದ್ದಾರೆ.

ಸಚಿವಸಂಪುಟದ ಹಿರಿಯ ಸದಸ್ಯರೊಬ್ಬರನ್ನು ಪ್ರಧಾನಿಯಾಗಿ ಆರಿಸದೆ ರಾಜೀವ್‌ರನ್ನು ಆರಿಸಿದ್ದಕ್ಕೆ ಚರಣ್ ಸಿಂಗ್ ಮುಂತಾದ ವಿರೋಧೀ ನಾಯಕರು ಪ್ರತಿಭಟನೆ, ತೀವ್ರ ಅಸಂತೋಷ ವ್ಯಕ್ತಪಡಿಸಿದ್ದಾರೆ.

ಸೌಲಭ್ಯಗಳ ವಿತರಣೆ

ಕೊಪ್ಪ: ಇಲ್ಲಿನ ತಾ. ಅ. ಮಂಡಳಿಯ ಆಶ್ರಯದಲ್ಲಿ ಅ. ೨೯ರಂದು ಹೊಸಕೊಪ್ಪ ಮತ್ತು ಹರಿಹರಪುರಗಳಲ್ಲಿ ಪ್ರಯೋಜನದಾರರಿಗೆ ಸೌಲಭ್ಯ ವಿತರಣಾ ಸಮಾರಂಭಗಳು ನಡೆದವು. ಶಾಸಕ ಗೋವಿಂದಗೌಡರು ಭಾಗ್ಯಜ್ಯೋತಿ ಉದ್ಘಾಟನೆ, ಸಸಿಗಳ ವಿತರಣೆ, ಹೆರಿಗೆ ಭತ್ಯ ವಿತರಣೆ, ಸಿಂಡಿಕೇಟ್ ಮತ್ತು ಕರ್ನಾಟಕ ಬ್ಯಾಂಕ್‌ಗಳಿಂದ ವಿವಿಧ ಸಾಲ ಸೌಲಭ್ಯಗಳ ವಿತರಣೆ ನೆರವೇರಿಸಿದರು

ದಿವಂಗತ ಪ್ರಧಾನಿಗೆ ಎಲ್ಲ ಕಡೆ

ಶೋಕತಪ್ತ ಜನತೆಯಿಂದ ಶ್ರದ್ಧಾಂಜಲಿ

ಕೊಪ್ಪ: ಹಂತಕರ ಗುಂಡಿಗೆ ಬಲಿಯಾದ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ಸ್ಮರಣಾರ್ಥ ಎಲ್ಲೆಡೆ ಶೋಕಾಚರಣೆ, ಸಂತಾಪ ಸೂಚಕ ಸಭೆಗಳು ನಡೆದ ವರದಿಗಳು ಬರುತ್ತಿವೆ.

ಅ. ೩೧ರ ಬುಧವಾರ ಸಂಜೆ ಇಂದಿರಾರ ಮರಣದ ವಾರ್ತೆ ಆಕಾಶವಾಣಿಯಲ್ಲಿ ಪ್ರಸಾರಗೊಂಡ ಕೂಡಲೇ ಶಾಸಕ ಗೋವಿಂದಗೌಡರು ಪುರಭವನದಲ್ಲಿ ಒಂದು ಸಂತಾಪ ಸೂಚಕ ಸಭೆ ನಡೆಸಿದರು. ಹತ್ಯೆಯನ್ನು ತೀವ್ರ ಸಂತಾಪದಿಂದ ಖಂಡಿಸಿ ದಿವಂಗತರ ಆತ್ಮಕ್ಕೆ ಶಾಂತಿ ಕೋರಿದರು. ಈ ಸಭೆ ಪೂರ್ವನಿಯೋಜಿತವಲ್ಲದಿದ್ದರೂ ಗಮನಾರ್ಹ ಸಂಖ್ಯೆಯಲ್ಲಿ ಸಾರ್ವಜನಿಕರು, ಜನತಾ ಕಾರ್ಯಕರ್ತರು ಭಾಗವಹಿಸಿ ದಿವಂಗತ ಪ್ರಧಾನಿಯವರಿಗೆ ಅಶ್ರುತರ್ಪಣ ಸಲ್ಲಿಸಿದರು

ಇದೇ ರೀತಿ ಶೃಂಗೇರಿಯಲ್ಲಿ ನಡೆದ ಸಭೆಯಲ್ಲಿ ಕೆ. ಆರ್. ಅಣ್ಣಯ್ಯಹೆಗ್ಡೆ, ಕೆ. ವಿ. ರಾಮಪ್ಪಯ್ಯ, ಟಿ. ಎನ್. ಕೃಷ್ಣಭಟ್ಟ, ಡಾ||ಮಂಜಪ್ಪಗೌಡ ಮುಂತಾದವರು ಮಾತನಾಡಿ ತೀವ್ರ ಶೋಕ ವ್ಯಕ್ತಪಡಿಸಿದರು.

ನ.ರಾ.ಪುರ, ಬಸರೀಕಟ್ಟೆ, ಕೆಸವೆ, ಸಿಗದಾಳು, ಶಾನುವಳ್ಳಿ, ಗುಡ್ಡೇತೋಟ, ಕೊಪ್ಪ ರೋಟರಿ ಕ್ಲಬ್, ರಾಜ್ ಅಭಿಮಾನಿ ಸಂಘ, ಮುಂತಾದ ಕಡೆಗಳಲ್ಲೂ ಸಂತಾಪ ಸೂಚಕ ಸಭೆಗಳು ನಡೆದ ವರದಿಗಳು ಬಂದಿವೆ

ಹತ್ಯೆ ಹೇಗೆ ನಡೆಯಿತು ....

ಅಕ್ಟೋಬರ್ ೩೧ರ ಬುಧವಾರ. ಬೆಳಿಗ್ಗೆ ೯ ಗಂಟೆಯಾಗಿ ಸ್ವಲ್ಪ ಹೊತ್ತಿನಲ್ಲಿ ಇಂದಿರಾ ಗಾಂಧಿ ತಮ್ಮ ನಿವಾಸದಿಂದ ಪಕ್ಕದ ಕಟ್ಟಡದ ತಮ್ಮ ಕಚೇರಿಗೆ ನಡೆದು ಹೋಗುತ್ತಿದ್ದಾಗ ಗಿಡಗಳ ಮರೆಯಿಂದ ಬಿಯಾಂತ್ ಸಿಂಗ್ ಮತ್ತು ಸತ್ವಂತ್ ಸಿಂಗ್ ಮಿಂಚಿನಂತೆ ಎರಗಿ ಅವರ ಮೇಲೆ ಗುಂಡಿನ ಮಳೆಗರೆದರು. ತಕ್ಷಣ ಕುಸಿದ ಇಂದಿರಾ ಅವರನ್ನು ಕೂಡಲೇ ಅಖಿಲ ಭಾರತ ವೈದ್ಯ ವಿಜ್ಞಾನ ಸಂಸ್ಥೆಗೆ ಸಾಗಿಸಿ ತುರ್ತು ಚಿಕಿತ್ಸೆ ನೀಡಲಾಯಿತಾದರೂ ಮಧ್ಯಾಹ್ನ ೧–೧೦ಕ್ಕೆ ಅವರು ಕೊನೆಯುಸಿರೆಳೆದರು

ಅವರ ಮೇಲೆ ೧೬ ಸುತ್ತು ಗುಂಡು ಹಾರಿಸಲಾಗಿದ್ದು. ಕನಿಷ್ಠ ೮ ಗುಂಡುಗಳು ಅವರ ಎದೆ, ಹೊಟ್ಟೆ ಮತ್ತು ತೊಡೆಗಳಿಗೆ ಹೊಕ್ಕಿದ್ದವೆಂದು ವರದಿಯಾಗಿದೆ.

ಹಂತಕರಿಬ್ಬರೂ ಪ್ರಧಾನಿಯವರ ಅಂಗರಕ್ಷಕರೇ ಆಗಿದ್ದರು. ಇನ್ನೊಬ್ಬ ಪೋಲೀಸ್ ಕೂಡ ಈ ಸಂಚಿನಲ್ಲಿ ಭಾಗಿಯಾಗಿದ್ದಾನೆ ಸಬ್ ಇನ್ಸ್‌ಪೆಕ್ಟರನಾದ ಬಿಯಾಂತ್ ನಂತರ ರಕ್ಷಕ ದಳದವರ ಗುಂಡಿಗೆ ಬಲಿಯಾದ. ಸತ್ವಂತ್ ಗಾಯಗೊಂಡು ಆಸ್ಪತ್ರೆಯಲ್ಲಿ ಗುಣಮುಖನಾಗುತ್ತಿದ್ದಾನೆ. ಇನ್ನೊಬ್ಬನನ್ನೂ ಬಂಧಿಸಲಾಗಿದೆ.

ಹಂತಕರು ತಮ್ಮ ಹಿಂದಿನ ಸೇವಾವಧಿಯಲ್ಲಿ ಅತ್ಯುತ್ತಮ ದಾಖಲೆ ಹೊಂದ್ದರೆನ್ನಲಾಗಿದೆ.

ಸತ್ವಂತ್ ಸಿಂಗ್ ಪೂರ್ತಿ ಗುಣಮುಖನಾದ ಕೂಡಲೇ ಪೋಲೀಸರು ಆತನನ್ನು ವಿಚಾರಣೆಗೆ ಒಳಪಡಿಸಲಿದ್ದಾರೆ.

ಈ ಹತ್ಯೆಯ ಬಗ್ಗೆ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ಆಯೋಗವೊಂದನ್ನು ರಚಿಸಲು ಕೇಂದ್ರ ಮಂತ್ರಿ ಮಂಡಳ ನಿರ್ಧರಿಸಿದೆ.

ಇಂದಿರಾ ಗಾಂಧಿಯವರ ಹತ್ಯೆ ಮತ್ತು ಅನಂತರ....

೧೯೬೬ರ ಆರಂಭದಿಂದ (ಮಧ್ಯೆ ೧೯೭೭ರಿಂದ ೭೯ರ ಅವಧಿ ಹೊರತು) ಸುಮಾರು ೧೬ ವರ್ಷ ಕಾಲ ಈ ದೇಶದ ಪ್ರಧಾನ ಮಂತ್ರಿಯಾಗಿ ಆಳಿದ ಶ್ರೀಮತಿ ಇಂದಿರಾ ಗಾಂಧಿ ಅಮಾನುಷವಾಗಿ ಕೊಲೆಯಾಗಿದ್ದಾರೆ. ಅವರ ಅಂಗ ರಕ್ಷಕರೇ ಅವರನ್ನು ಕೊಂದಿದ್ದು ಒಂದು ವಿಪರ್ಯಾಸ; ದುರಂತ ಕೂಡ.

ಪಂಜಾಬಿನ 'ಉಗ್ರಗಾಮಿ'ಗಳು ಈ ಕೊಲೆಯ ಸಂಚು ಹೂಡಿದ್ದರೆಂದು ಹೇಳಲಾಗುತ್ತಿದೆ. ಪಂಜಾಬಿನಲ್ಲಿ ಉಗ್ರಗಾಮಿ ಚಟುವಟಿಕೆ ಮತ್ತು ಅದರ ದಮನ ಆರಂಭವಾದಾಗಿನಿಂದಲೂ ಇಂದಿರಾ, ರಾಜೀವ್ ಮುಂತಾದವರಿಗೆಲ್ಲ ಕೊಲೆ ಬೆದರಿಕೆ ಹಾಕಲಾಗಿತ್ತು. ಕಳೆದ ಜೂನಲ್ಲಿ ಭಾರತೀಯ ಸೇನೆ ಸಿಖ್ಖರ ಪವಿತ್ರ ಸುವರ್ಣ ಮಂದಿರದೊಳಗೆ ನುಗ್ಗಿದಂದಿನಿಂದ ಕೊಲೆಯ ಸಂಚಿನ ಖಚಿತವಾದ ಯತ್ನಗಳು ನಡೆಯುತ್ತಿರುವುದು ಖಾತ್ರಿಯಾಗಿತ್ತು. ಆದರೂ ಈ ಹತ್ಯೆಯಿಂದ ಈ ದೇಶ ಮಾತ್ರವಲ್ಲ, ಇಡೀ ವಿಶ್ವವೇ ಆವಾಕ್ಕಾಗಿದೆ.

ಹಿಂಸೆ, ಭಯೋತ್ಪಾದನೆಗಳು ಇಂದು ವಿಶ್ವವ್ಯಾಪಿ. ಆದರೆ ಹತ್ಯೆಗಳು ಸಮಸ್ಯೆ ಬಗೆಹರಿಸುವುದಿಲ್ಲ, ಇನ್ನಷ್ಟು ಜಟಿಲಗೊಳಿಸಬಹುದು ಮಾತ್ರ. ಸಿಖ್ಖರ ಸಮಸ್ಯೆಗಳ ಬಗ್ಗೆ, ಅವರ ನ್ಯಾಯಯುತ ಬೇಡಿಕೆಗಳ ಬಗ್ಗೆ ಸಹಾನುಭೂತಿ ಇರುವವರೂ ಸಹ ಈ ಹತ್ಯೆಯನ್ನು ಒಪ್ಪುವುದಿಲ್ಲ. ಹೇಡಿಗಳು ಮಾತ್ರ, ಜನರನ್ನು ದೀರ್ಘ ಕಾಲದ ಹೋರಾಟಕ್ಕೆ ಸಂಘಟಿಸಲಾರದೆ ಹತಾಶರಾಗಿ ಇಂಥ ವೈಯಕ್ತಿಕ ಹಿಂಸೆಗೆ ಇಳಿಯುತ್ತಾರೆ. ಇಂದಿರಾ ಹತ್ಯೆ ಸರ್ವಥಾ ಖಂಡನೀಯ.

ಆದರೆ ಈಗ ದೇಶಾದ್ಯಂತ ಮುಗ್ಧ ಸಿಖ್ ಜನರ ಮೇಲೆ ನಡೆಯುತ್ತಿರುವ ವ್ಯಾಪಕ ಜನಾಂಗ ಹತ್ಯಾಕಾಂಡ ಕೂಡ ಅಷ್ಟೇ ಖಂಡನಾರ್ಹ.

ದೆಹಲಿ, ಮುಂಬಯಿ, ಕಲ್ಕತ್ತ ಮತ್ತು ಉತ್ತರ ಭಾರತದ ೧೫–೨೦ ನಗರಗಳಲ್ಲಿ ಈ ನಾಲ್ಕಾರು ದಿನದಲ್ಲಿ ಮಹಿಳೆಯರು, ಮಕ್ಕಳೆನ್ನದೆ ಒಂದು ಸಾವಿರಕ್ಕೂ ಹೆಚ್ಚು ಜನ ಸಿಖ್ಖರನ್ನು ಕ್ರೂರವಾಗಿ ಕೊಲ್ಲಲಾಗಿದೆಯೆಂದು ವರದಿಯಾಗಿದೆ. ಇದರಲ್ಲಿ ಅರ್ಧಕ್ಕಿಂತ ಹೆಚ್ಚು ಸಾವು-ನೋವು ದೆಹಲಿಯಲ್ಲೇ ನಡೆದಿದೆ.

ಈ ಕ್ರೌರ್ಯ ಕಳೆದೆರಡು ದಿನಗಳಲ್ಲಿ ಸ್ವಲ್ಪ ಕಡಿಮೆಯಾಗಿರುವಂತೆ ಕಂಡಿದೆಯಾದರೂ ಭಯದ ವಾತಾವರಣ ಇನ್ನೂ ಪೂರ್ತಿ ತಿಳಿಯಾಗಿಲ್ಲ.

ಅಹಿಂಸೆಯ ಜಪ ಮಾಡುತ್ತಲೇ ಹಿಂಸೆ, ಕ್ರೌರ್ಯಗಳನ್ನೇ ಬೆಳೆಸಿಕೊಂಡು ಬಂದಿರುವ ಈ ನಾಡಿನಲ್ಲಿ ಈ ಜನಾಂಗ ಹತ್ಯೆ ಹಲವರಿಗೆ ಅಸಹಜವಾಗಿ ಕಾಣಿಸದಿರಲೂ ಬಹುದು. ಆದರೆ ಮಾನವತೆಯನ್ನು ಪ್ರೀತಿಸುವ ಎಲ್ಲರಿಗೂ ಈ ಹಿಂಸೆ ಕೂಡ ಇಂದಿರಾ ಗಾಂಧಿಯವರ ಹತ್ಯೆಯಂತೆಯೇ ತೀವ್ರ ದುಃಖವನ್ನುಂಟುಮಾಡುವ ಸಂಗತಿಯಾಗಿದೆ.

'ಸಿಖ್ಖರು ಪ್ರತ್ಯೇಕತಾವಾದಿಗಳು, ದೇಶದ್ರೋಹಿಗಳು' ಎಂಬಂಥ ಭಾವನೆ ಇತ್ತೀಚೆಗೆ ದೇಶಾದ್ಯಂತ ಹರಡಿದೆ. ಹಾಗಾಗಿ ಅವರನ್ನು ತೀವ್ರವಾಗಿ ದ್ವೇಷಿಸುವ, "ಅವರನ್ನು ದೇಶದಿಂದ ಓಡಿಸಬೇಕು, ನಿರ್ನಾಮ ಮಾಡಬೇಕು" ಮುಂತಾದ ತೀವ್ರ ವಿಚಾರದ ಜನರಿರುವುದು ಕಂಡುಬರುತ್ತದೆ.

([illegible])

ನಮ್ಮದು ಸುಖೀ ರಾಜ್ಯವೆ ?

(ತಾ|| ೨-೧೧-೧೯೭೪ರ 'ನಮ್ಮ ನಾಡು' ಸಂಪಾದಕೀಯದಿಂದ)

ಸಾವಿರಾರು ಕೋಟಿ ರೂಪಾಯಿಗಳನ್ನು ಹೊರ ದೇಶಗಳಿಂದ, ವಿಶ್ವ ಬ್ಯಾಂಕಿನಿಂದ, ಮತ್ತೆಲ್ಲೆಲ್ಲಿ ಸಾಲ ಸಿಗುತ್ತದೋ ಅಲ್ಲೆಲ್ಲ ಸಾಲ ಮಾಡಿ, ಸಾಲ ಕೊಟ್ಟವರು ಹೇಳುವ ಪ್ರಕಾರವೇ ದೇಶದ ಎಲ್ಲ ಕೆಲಸ ಕಾರ್ಯಗಳನ್ನು ಮಾಡುವ ಜೀತದಾಳಿನ ಸ್ಥಿತಿಗೆ ಇಂದು ನಮ್ಮ ಭಾರತ ದೇಶ ಇಳಿದಿದೆ.

ಸುಖೀ ರಾಜ್ಯ ಅಥವಾ ಕಲ್ಯಾಣ ರಾಜ್ಯ (ವೆಲ್‌ಫೇರ್ ಸ್ಟೇಟ್) ಎಂದು ಸಂವಿಧಾನದಲ್ಲಿ ಕರೆದುಕೊಳ್ಳುವ ಭಾರತವಾಗಲಿ ಕರ್ಣಾಟಕವಾಗಲಿ ಈ ಸುಖೀ ರಾಜ್ಯದ ಕಲ್ಪನೆ ಅಥವಾ ವಿಶ್ಲೇಷಣೆಗೆ ಕತ್ತಂತೆ ಪ್ರಜೆಗಳ ಯೋಗಕ್ಷೇಮ ವಿಚಾರಿಸಿಕೊಳ್ಳುವ ಜವಾಬ್ದಾರಿಯನ್ನು ಪ್ರದರ್ಶಿಸುತ್ತಿವೆಯೇ ಎಂಬುದನ್ನು ಎಲ್ಲ ಜನರೂ, ಸ್ವಾತಂತ್ರ್ಯ ದಿನವನ್ನಾಗಲಿ ಅಥವಾ ರಾಜ್ಯೋತ್ಸವವನ್ನಾಗಲಿ ಆಚರಿಸುವ ಮುನ್ನ ಸ್ವಲ್ಪ ಆಲೋಚಿಸಬೇಕಾಗಿದೆ.

ಸುಖೀ ರಾಜ್ಯದಲ್ಲಿ 'ರಾಜ್ಯ'ದ ಜವಾಬ್ದಾರಿ ಗರಿಷ್ಠ ಪ್ರಮಾಣದ್ದಾಗಿರುತ್ತದೆ. ಪ್ರತೀ ಪ್ರಜೆಗೆ ಸುಖ, ಕಲ್ಯಾಣಗಳನ್ನು ಒದಗಿಸಿ, ಯಾವುದೇ ಭಯವಾಗಲಿ ಆತಂಕವಾಗಲಿ ಇಲ್ಲದ ಮುಕ್ತ ವ್ಯಕ್ತಿಯಾಗಿ ಪ್ರತಿ ಪ್ರಜೆಯೂ ವಿಕಾಸವಾಗುವಂಥ ವ್ಯವಸ್ಥೆ ಮಾಡಬೇಕಾದ್ದು ಸುಖೀ ರಾಜ್ಯದ ಜವಾಬ್ದಾರಿ.

ಯಾವುದೇ ಹೊಸ ಪ್ರಜೆ ಹುಟ್ಟಿದ ಕೂಡಲೇ ಆ ಮಗುವಿನ ಯೋಗಕ್ಷೇಮದ ಜವಾಬ್ದಾರಿ ಸುಖೀ ರಾಜ್ಯದ್ದು. ಆ ಮಗುವಿನ ತಂದೆ ತಾಯಿಗಳ ಆದಾಯ ಮಗುವಿನ ಆರೋಗ್ಯಕರ ಬೆಳವಣಿಗೆಗೆ ಸಾಕೇ ಇಲ್ಲವೇ ಎಂದು ವಿಚಾರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾದುದು ಸುಖೀ ರಾಜ್ಯದ ಜವಾಬ್ದಾರಿ. ಬಾಲ್ಯಾವಸ್ಥೆಯ **ನಂತರ** ಆ ಮಗುವಿನ ಶಿಕ್ಷಣದ ವ್ಯವಸ್ಥೆ, **ಶಿಕ್ಷಣ** ಮುಗಿದ **ನಂತರ** ಉದ್ಯೋಗದ **ವ್ಯವಸ್ಥೆ**, ಉದ್ಯೋಗದ **ವಯಸ್ಸಿನ** ನಂತರ ವೃದ್ಧಾಪ್ಯ ವೇತನದ **ವ್ಯವಸ್ಥೆ**, ಈ ನಡುವೆ **ಹುಟ್ಟಿನಿಂದ** ಸಾಯುವವರೆಗಿನ ಆರೋಗ್ಯದ **ವ್ಯವಸ್ಥೆ**— ಈ ಕನಿಷ್ಠ ಕೆಲಸಗಳನ್ನು ಯಾವುದೇ ರಾಜ್ಯ ಮಾಡಿದರೆ ಮಾತ್ರ ಅಂತಹ ರಾಜ್ಯ ಸುಖೀ ರಾಜ್ಯವೆಂದು ಕರೆಸಿಕೊಳ್ಳುವ ಅರ್ಹತೆ ಪಡೆಯುತ್ತದೆ.

ಹೊಟ್ಟೆ ಹೊರೆಯುವುದಕ್ಕಾಗಿ ಮನೆ ಬಿಟ್ಟು ವಲಸೆ ಹೋಗುವುದನ್ನು; ಹೊಟ್ಟೆ ಪಾಡಿಗಾಗಿ ನಮ್ಮ ಹೆಣ್ಣು ಮಕ್ಕಳು ವೇಶ್ಯೆಯರಾಗುತ್ತಿರುವುದನ್ನು; ಅಂಗವಿಕಲರು, ಮುದುಕರು ಮತ್ತು ರೋಗಿಷ್ಠರು ಭಿಕ್ಷುಕರಾಗುತ್ತಿರುವುದನ್ನು ನಾವು ಪೂರ್ಣವಾಗಿ ನಿರ್ನಾಮ ಮಾಡಿದಂದು ಮಾತ್ರ ರಾಜ್ಯೋತ್ಸವವನ್ನಾಗಲಿ ಸ್ವಾತಂತ್ರ್ಯ ದಿನವನ್ನಾಗಲಿ ಆಚರಿಸಲು ನಾವು ಅರ್ಹರಾಗುತ್ತೇವೆ.

ಪದ್ಯದಂಕಣ

'ಬೆಂಗಳೂರು ಭೇಟಿ

ನಾ ಹೋದೆ ಬೆಂಗಳೂರಿಗೆ ಮೊದಲ ಬಾರಿ
ಜೋಕೆ! ಎಂದರು ನಮ್ಮಜ್ಜಿ ಸಾರಿ ಸಾರಿ
ಆದರೂ ನಾ ಮೋಸ ಹೋದೆ ಇಲ್ಲಿ ಬಾರಿ ಬಾರಿ
ಬೇಗ ನಾ ಹಿಡಿದೆ ಅನ್ನಿ ನಮ್ಮೂರ ದಾರಿ

ಇಲ್ಲಿರುವುದೊಂದು ದೊಡ್ಡ ವಿಧಾನ ಸೌಧ
ಇದ ನೋಡಲು ನಾ ಹೋದೆ ಹಳ್ಳಿ ಹೈದ
ಕೇಳದೇ ನುಗ್ಗಿದ್ದಕ್ಕೆ ಕಾವಲುಗಾರ ಬೈದ
ಯಾರೆಂದು ನೋಡಿದರೆ ಅವ ನಮ್ಮೂರ ಮಾದ!

ಇಲ್ಲಿ ಇದ್ದರು ಪ್ಯಾಂಟು ಹಾಕಿದವರು ಹೆಚ್ಚು ಹೆಚ್ಚು
ಅವರೆಲ್ಲ ಹುಡುಗಿಯರೆಂದು ತಿಳಿದಾಗ ನಾನಾದೆ ಪೆಚ್ಚು
ಅವರ ಮೇಲೆ ಬಂತು ನನಗೆ ಹೇಳಲಾರದ ರೊಚ್ಚು
ನೀವೇನೇ ಹೇಳಿ, ನನಗೆ ನಮ್ಹಳ್ಳಿಯೇ ಮೆಚ್ಚು

—ರಮೇಶ್ ಎಸ್ವಿ, ಬೇಗಾರು.

ಕೃಷಿ: 'ವಿದೇಶೀ ಪದ್ಧತಿ ಅನುಕರಣೆ ಸಲ್ಲ'

ವಿಶ್ವಸಂಸ್ಥೆ: ಅಭಿವೃದ್ಧಿಶೀಲ ರಾಷ್ಟ್ರಗಳು ಮುಂದುವರಿದ ದೇಶಗಳ ಸಿದ್ಧಾಂತದ ಹೊರೆ ಹೊರುವುದನ್ನು ಬಿಟ್ಟು ದೇಶೀ ಕೃಷಿ ಪದ್ಧತಿಯ ಕಡೆಗೇ ತೀವ್ರ ಗಮನ ಕೊಡಬೇಕು ಎಂದು ಹಿಂದೆ ಭಾರತದಲ್ಲಿ ರಾಯಭಾರಿಯಾಗಿದ್ದ ಪ್ರೊ|| ಜಾನ್ ಕೆನೆತ್ ಗಾಲ್ ಬ್ರೇತ್ ಅವರು ಹೇಳಿದ್ದಾರೆ.

ವಿಶ್ವ ಆಹಾರ ದಿನದ ಸಂಬಂಧವಾಗಿ ವಿಶ್ವಸಂಸ್ಥೆಯಲ್ಲಿ ನಡೆದ ಸಮಾರಂಭದಲ್ಲಿ ಅವರು ಪ್ರಧಾನ ಭಾಷಣ ಮಾಡುತ್ತಾ, "ಮುಂದುವರಿದ ಕೈಗಾರಿಕಾ ದೇಶಗಳು 'ಹೊಸ ದೇಶಗಳ' ಸಾಮಾಜಿಕ–ಆರ್ಥಿಕ ಪ್ರಗತಿಗೆ ಮಾರ್ಗದರ್ಶಿ ಹಾಗೂ ಮಾದರಿ ಆಗಬಲ್ಲವೆಂದು ನಂಬುವುದು ತಪ್ಪು" ಎಂದು ಕಿವಿಮಾತು ಹೇಳಿದರು.

ಪ್ರಬುದ್ಧ ಕೈಗಾರಿಕಾ ಜಗತ್ತಿಗೆ ಪ್ರಸ್ತುತವಾದ ಸಿದ್ಧಾಂತಗಳನ್ನು ಇತರ ದೇಶಗಳ ಕೃಷಿರಂಗಕ್ಕೆ ಅನ್ವಯಿಸುವುದು ಗಂಭೀರವಾದ ತಪ್ಪು. ಅದರಿಂದಾಗಿ ನಾವು ಅಭಿವೃದ್ಧಿಗೇ ತಡೆ ಹಾಕಿದಂತಾಗಿದೆ ಎಂದು ಗಾಲ್ ಬ್ರೇತ್ ನುಡಿದರು.

ಸುದ್ದಿ ವಿಶೇಷ

ಅಮೆರಿಕಾದಲ್ಲಿ ಯಶಸ್ವಿಯಾದುದು ಪಂಜಾಬಿನಲ್ಲಿ ಕೂಡಾ ಸಫಲವಾಗಬೇಕೆನ್ನುವ ಅಮೆರಿಕ ಕೃಷಿ ಸಲಹೆಗಾರರ ಜತೆ, ಭಾರತದಲ್ಲಿದ್ದಾಗ ತಾವು ಹೋರಾಟವನ್ನೇ ನಡೆಸಬೇಕಾಯಿತು ಎಂದು ಪ್ರೊ||ಗಾಲ್‌ಬ್ರೇತ್ ಸ್ಮರಿಸಿಕೊಂಡರು.

(ಅಮೆರಿಕದ ವಿದ್ವಾಂಸರು ಹೇಳಿದ ಮೇಲಾದರೂ ನಮ್ಮ ದೇಶದವರ ಕಣ್ಣು ತೆರೆದೀತೆ?)

ಸ್ಥಳೀಯರಿಗೆ ಆದ್ಯತೆಗೆ ಇಂದಿರಾ ಕರೆ

ಕೈಗಾರಿಕಾ ಘಟಕದಲ್ಲಿ ಉದ್ಯೋಗ ನೀಡುವಾಗ 'ಸ್ಥಳೀಯರಿಗೇ' ಆದ್ಯತೆ ಕೊಡಬೇಕೆಂದು ಪ್ರಧಾನಿ ಇಂದಿರಾ ಈಚೆಗೆ ಮಧ್ಯಪ್ರದೇಶದಲ್ಲೊಂದು ಕಡೆ ಮಾತಾಡುತ್ತಾ ಕರೆ ನೀಡಿದ್ದರು.

ವಿಶೇಷತಃ ಹಿಂದುಳಿದ ಪ್ರದೇಶಗಳಲ್ಲಿ ಸ್ಥಳೀಯರನ್ನು ಆರಿಸಿಕೊಂಡು, ಅವರಿಗೆ ಅಗತ್ಯ ಕೌಶಲ್ಯವಿಲ್ಲದಿದ್ದರೂ ತರಬೇತಿ ಕೊಡಿಸಿಯಾದರೂ ಅವಕಾಶ ಕೊಡಬೇಕೆಂದು ಅವರು ಹೇಳಿದ್ದರು.

ವಿಜ್ಞಾನದ ದೃಷ್ಟಿ

(ನಾವೆಲ್ಲ ಇಲ್ಲೇ ನಮ್ಮ ನಮ್ಮ ಕಾಲು ಬುಡದಲ್ಲೇ ಸುತ್ತು ಹಾಕಿಕೊಳ್ಳುತ್ತ ಮಂಕ್ರೊ ಮಂಕ್ರೊ ಕೂಪ ಮಂಡೂಕಗಳಾಗುತ್ತ ಅಜ್ಞಾನವನ್ನೇ ಅಪ್ಪಿಕೊಳ್ಳುತ್ತಿರುವಾಗ, ವಿಜ್ಞಾನ ನಮ್ಮೆಲ್ಲರಿಗಾಗಿ ಎತ್ತ ದೃಷ್ಟಿ ಇಟ್ಟಿದೆ, ಎಷ್ಟು ದೂರದ್ದನ್ನ ಯೋಚಿಸುತ್ತಿದೆ — ಎಂಬುದನ್ನು ಮನಗಾಣಿಸಲು ಈ ಅಂಕಣ ಆರಂಭಿಸುತ್ತಿದ್ದೇವೆ. —ಸಂ.)

ರಕ್ತಕ್ಕೆ ನೇರವಾಗಿ ಔಷಧಿ ಸೇರ್ಪಡೆ ಮಾಡುವ ಹೊಸ ಶೋಧ: 'ಮೊಲಿಕ್ಯುಲರ್ ಸ್ಪಾಂಜ್'

ದೇಹದೊಳಕ್ಕೆ ಔಷಧ ತಲುಪಿಸುವ ವಿಧಾನ ಮತ್ತು ಸಾಧನಗಳ ಬಗ್ಗೆ ಸತತವಾದ ಪ್ರಯೋಗಗಳು ನಡೆಯುತ್ತಲೇ ಇವೆ— ಮಾತ್ರೆಗಳು, ಇಂಜೆಕ್ಷನ್, ಕೆಲವು ಸಂದರ್ಭಗಳಲ್ಲಿ ಮುಲಾಮು, ... ಇತ್ಯಾದಿ.

ಈಗ್ಗೆ ೧೦೦ ವರ್ಷಗಳ ಹಿಂದೆ ಜಿಲ್ಯಾಟಿನ್ ಕ್ಯಾಪ್ಸೂಲ್‌ಗಳನ್ನು ಕಂಡುಹಿಡಿಯಲಾಗಿತ್ತು. ಅನಂತರ, ಶರೀರಕ್ಕೆ ಔಷಧ ಒದಗಿಸುವ ಕ್ರಮದಲ್ಲೇ ವಿನೂತನವಾದ ಸಾಧನೆಯೊಂದನ್ನು ಈಚೆಗೆ ಮಾಡಲಾಗಿದೆ.

ನಂಬಿಕೆ

ಮಾತ್ರೆ ಮತ್ತು ಇತರ ಬಗೆಯ ಔಷಧಗಳನ್ನು ಸೇವಿಸಿದಾಗ ಅದರಲ್ಲಿ ಬಹುಪಾಲು ಜಠರ, ಕರುಳು ಮುಂತಾದ ಕಡೆ ಹೀರಲ್ಪಟ್ಟು ಕಡಿಮೆ ಪ್ರಮಾಣ ಮಾತ್ರ ರಕ್ತಕ್ಕೆ ಸೇರುತ್ತದೆ. ಇದರಿಂದ ಔಷಧ ದಂಡ (ವ್ಯರ್ಥ)ವಾಗುವದಲ್ಲದೆ, ದುಷ್ಪರಿಣಾಮ(ಸೈಡ್ ಎಫೆಕ್ಟ್)ಗಳೂ ಆಗಬಹುದು. ಅಲ್ಲದೆ, ಔಷಧವನ್ನು ಒಂದೇ ಸಲ **ಒಂದಷ್ಟು** ಸೇವಿಸುವುದಕ್ಕಿಂತ ನಿಧಾನವಾಗಿ, ದೀರ್ಘ ಅವಧಿಯಲ್ಲಿ ಸ್ವಲ್ಪಸ್ವಲ್ಪವಾಗಿ ರಕ್ತಕ್ಕೆ ಸೇರ್ಪಡೆ ಮಾಡಿದಲ್ಲಿ ಅತ್ಯಂತ ಪರಿಣಾಮಕಾರಿ **ಎಂ**ಬುದು ಬಹಳ ಕಾಲದಿಂದ ವಿಜ್ಞಾನಿಗಳ ನಂಬಿಕೆಯಾಗಿದೆ. ಆದರೆ ಹಾಗೆ **ಮಾಡುವ** ವಿಧಾನ ಮಾತ್ರ ಈವರೆಗೆ ಸಿಕ್ಕಿರಲಿಲ್ಲ.

'ಮೊಲಿಕ್ಯುಲರ್ ಸ್ಪಾಂಜ್'

ಈಗ ವಿಜ್ಞಾನ ರೂಪಿಸಿರುವ ಸಾಧನದ ಹೆಸರು 'ಮೊಲಿಕ್ಯುಲರ್ ಸ್ಪಾಂಜ್'. ಇದರಿಂದ ಅಗತ್ಯ ಪ್ರಮಾಣದ ಔಷಧವನ್ನು ಅಗತ್ಯವಾದ ವೇಗದಲ್ಲಿ ಅಗತ್ಯವಾದಷ್ಟು ದೀರ್ಘ ಅವಧಿಯವರೆಗೆ ನೇರವಾಗಿ ರಕ್ತದೊಳಕ್ಕೆ ಸೇರಿಸಲು ಸಾಧ್ಯವಾಗುತ್ತದೆ.

ಇದು ಪ್ಲಾಸ್ಟಿಕ್‌ನ ತೆಳು ಹಾಳೆಯಂತಿರುವ ಪಟ್ಟಿ. ಇದು ತನ್ನ ತೂಕದ ಶೇ. ೯೮ರಷ್ಟು ದ್ರವವನ್ನು ಹೀರಿಟ್ಟುಕೊಳ್ಳಬಲ್ಲದು. ಔಷಧವನ್ನು ದ್ರವ ರೂಪದಲ್ಲಿ ಇದರೊಳಗೆ ಹೀರಿಸಿ, ಚರ್ಮಕ್ಕೆ ಅಂಟಿಸಿದರೆ, ಅಗತ್ಯಕ್ಕೆ ತಕ್ಕಂತೆ ಔಷಧವನ್ನು ರಕ್ತಕ್ಕೆ ಸೇರಿಸುತ್ತದೆ– ದಿನ, ವಾರ, ತಿಂಗಳುಗಟ್ಟಲೆ ಬೇಕಾದರೂ.

ಇನ್ನೂ ವೈಶಿಷ್ಟ್ಯವೆಂದರೆ, ಒಂದೇ ಸಲಕ್ಕೆ ಎರಡು ಔಷಧಿಗಳನ್ನು ಬೇರೆ ಬೇರೆ ಪ್ರಮಾಣದಲ್ಲಿ ರಕ್ತಕ್ಕೆ ಸೇರಿಸಬಹುದು.

ಈವರೆಗೆ ೩ ಔಷಧಿಗಳನ್ನು ಮಾತ್ರ ಇಂಥ ಸಾಧನಕ್ಕೆ ಅಳವಡಿಸಲಾಗಿದೆ. ಕನಿಷ್ಠ ಇನ್ನೂ ೧೨ ಔಷಧಿಗಳನ್ನು ಈ ರೂಪದಲ್ಲಿ ತಯಾರಿಸಬಹುದೆಂದು ಇದರ ಸಂಶೋಧಕರ ನಿರೀಕ್ಷೆ.

(೩ನೇ ಪುಟಕ್ಕೆ)

ಮಣ್ಣೇ ಇಲ್ಲದೆ ಭಾರಿ ಬೆಳೆ !

ಕೈಗಾರಿಕೆ ಬೆಳವಣಿಗೆಯೊಡನೆ ಕೃಷಿಗೆ ಭೂಮಿ ದೊರೆಯುವುದು ಕಡಿಮೆಯಾಗುತ್ತದೆ. ಇದರಿಂದ ಉಂಟಾಗುವ ಬಿಕ್ಕಟ್ಟನ್ನು ಬಗೆಹರಿಸುವುದು ಹೇಗೆ?

ಈ ಸಮಸ್ಯೆಯ ಬಗ್ಗೆ ತಲೆ ಕೆಡಿಸಿಕೊಂಡ ಜಪಾನಿನ ೭೧ ವರ್ಷದ ಕೃಷಿ ಇಂಜಿನಿಯರ್ ಶಿಗವೊ ಸೂಜಾವ ೨೦ ವರ್ಷ ಹಿಂದೆ ಮಣ್ಣೇ ಇಲ್ಲದೆ ಬೆಳೆ ತೆಗೆಯಬಹುದಾದ ಕೃಷಿ ತಂತ್ರದ ಬಗ್ಗೆ ಅಧ್ಯಯನಕ್ಕೆ ತೊಡಗಿದರು. ಆ ತಂತ್ರವೇ **ಈಗ** "ಹೈಪೋನಿಕಾ" ತಂತ್ರವೆಂದು ಜನಪ್ರಿಯವಾಗಿ, ಜಪಾನ್ ದಾಟಿ, ಆಫ್ರಿಕ, ಪೂರ್ವ ಏಷ್ಯ, ದಕ್ಷಿಣ ಅಮೆರಿಕಾಗಳ ಕೃಷಿ ತಜ್ಞರನ್ನು ಆಕರ್ಷಿಸಿದೆ.

ಸೂರ್ಯನ ಬೆಳಕು, ನೀರು ಮತ್ತು ರಸಗೊಬ್ಬರದ ಹಿತವಾಗಿ ಪ್ರಮಾಣವನ್ನು ಬಳಸುವುದು ಹೈಪೋನಿಕಾ ತಂತ್ರ. ಬೀಜಗ

(೩ನೇ ಪುಟಕ್ಕೆ)

ಮಲೆನಾಡಿನ ಉದಯೋನ್ಮುಖ ಅಣುಕು ಕಲಾವಿದ
ಹೆಚ್. ವಿ. ನರಸಿಂಹ ಮೂರ್ತಿ

ಶೃಂಗೇರಿ, ಕೊಪ್ಪ, ನ. ರಾ. ಪುರ ತಾ|| ಗಳಲ್ಲಿ ಮತ್ತು ತೀರ್ಥಹಳ್ಳಿ, ಶಿವಮೊಗ್ಗಗಳಲ್ಲಿ ಹಲವು ಅಣುಕು ಕಾರ್ಯಕ್ರಮಗಳನ್ನು ನೀಡಿ ಪ್ರೇಕ್ಷಕರಿಗೆ ಈಗಾಗಲೇ ಸಾಕಷ್ಟು ಪರಿಚಿತರಾಗಿರುವ ಹೆಚ್. ವಿ. ನರಸಿಂಹ ಮೂರ್ತಿ ಕೊಪ್ಪ ತಾ|| ಹೊಸಕೊಪ್ಪದ ಬಳಿಯ ...ಳಿನುಕದವರು. ಬಿ. ಎ. ಪದವೀಧರರು.


ಹಂತಹಂತವಾಗಿ

ಮೊದಲಿಗೆ ಸ್ನೇಹಿತರ ಮಧ್ಯೆ ಹೀಗೇ ತಮಾಷೆಗೆ ಶುರುವಾದ ಧ್ವನಿ ಅನುಕರಣೆ ಮತ್ತು ಹಾವ ಭಾವದ ನಟನೆ ಕ್ರಮೇಣ ಹವ್ಯಾಸವಾಗಿ ಬೆಳೆದು, ಅದನ್ನೇ ಕ್ರಮಬದ್ಧವಾಗಿ ಅಭ್ಯಾಸ ಮಾಡುತ್ತ ಈಗ ಸುಮಾರು ಒಂದೂಕಾಲು ಗಂಟೆ ಕಾಲ ಕಾರ್ಯಕ್ರಮ ಕೊಡಬಲ್ಲಷ್ಟು 'ಸರಕು' ಮಾಡಿಕೊಂಡಿದ್ದಾರೆ. ಒಂದು ಕಾರ್ಯಕ್ರಮಕ್ಕೂ ಇನ್ನೊಂದಕ್ಕೂ ಬದಲಾವಣೆ, ಸುಧಾರಣೆ ಮಾಡಿಕೊಳ್ಳುತ್ತೇನೆನ್ನುವ ನರಸಿಂಹ ಮೂರ್ತಿ, ಇನ್ನೂ ಕಲಿಯುತ್ತಲೇ ಇದ್ದಾರೆ.

'ಸರಕು'

ಪಕ್ಕವಾದ್ಯ, ಗೊರಕೆಯ ವಿವಿಧ ಸ್ವರಗಳು, ರೈಲು, ಒಡಕು ಪ್ಲೇಟು, ಸಾಮೂಹಿಕ ಮಂತ್ರ, ಮುಂತಾದುವುಗಳಲ್ಲದೆ, ಕೆಲವು ವಿಶಿಷ್ಟ ವ್ಯಕ್ತಿಗಳ, ಅದರಲ್ಲೂ ಮಲೆನಾಡಿನ ವಿವಿಧ ರೀತಿಯ ಜನಗಳ ಮಾತಿನ ಧ್ವನಿ ಮತ್ತು ಧಾಟಿ ಅನುಕರಿಸುವುದರಲ್ಲಿ ಬಹಳ ಪ್ರವೀಣರಾಗಿದ್ದಾರೆ.


ಲಯನ್ಸ್ ಕ್ಲಬ್ಬಿನ ಸಮಾವೇಶಗಳು, ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನ,



ಮುಂತಾದ ಹಲವು ಹನ್ನೊಂದು ಸಂದರ್ಭಗಳಲ್ಲಿ ಕಾರ್ಯಕ್ರಮ ನೀಡಿರುವ ನರಸಿಂಹ ಮೂರ್ತಿ ಹಲವು ಬಾರಿ ಆಕಾಶವಾಣಿ ಕಾರ್ಯಕ್ರಮಗಳಲ್ಲೂ ಭಾಗವಹಿಸಿದ್ದಾರೆ.

'ಬಿರುದು'ಗಳು, ಪ್ರಶಸ್ತಿಗಳು

ವಿವಿಧ ಕಡೆಗಳ ಕಲಾಭಿಮಾನಿಗಳಿಂದ 'ಮಿಸ್ಟರ್ ಮಿಮಿಕ್ರಿ', 'ಕಾಮೆಡಿಯನ್



ಆಫ್ ಶಿವಮೊಗ್ಗ – ೧೯೭೩' ಮುಂತಾದ ಬಿರುದುಗಳನ್ನೂ ಅನೇಕ ಪ್ರಶಸ್ತಿಗಳನ್ನೂ ಗಳಿಸಿದ್ದಾರೆ.

ಇಷ್ಟೇ ಅಲ್ಲದೆ, ಯುವಜನ ಸೇವಾ ಇಲಾಖೆ ನಡೆಸುವ ಯುವಜನ ಮೇಳಗಳಲ್ಲಿ ಏಕಪಾತ್ರಾಭಿನಯದಲ್ಲಿ ತಾ|| ಮಟ್ಟದಿಂದ ಹಿಡಿದು ವಿಭಾಗ ಮಟ್ಟದ ವರೆಗೂ ಸ್ಪರ್ಧಿಸಿ ಹೆಸರು ಗಳಿಸಿದ್ದಾರೆ.

ಇಷ್ಟಾದರೂ ನರಸಿಂಹ ಮೂರ್ತಿಯವರ ಕಲೆಯ ಕಲಿಕೆ, ಅಭ್ಯಾಸ ಮುಗಿದಿಲ್ಲ. ಇದು ಸಹಜ. ಹೆಚ್ಚಿನ ಪರಿಶ್ರಮ ಮತ್ತು ಸೂಕ್ತ ಅವಕಾಶಗಳಿಂದ ಅವರು ಮಲೆನಾಡಿನ ಕೀರ್ತಿಯನ್ನು ಎತ್ತರೆತ್ತರಕ್ಕೆ ಏರಿಸಲೆಂದು 'ಮುಂಜಾವು' ಹಾರೈಕೆ.

ಅತ್ಯುತ್ತಮ ಅಕ್ಕಿ ದೊರಕಿಸುವ ಪ್ರೀಕ್ಲೀನರ್, ರಬ್ಬರ್ ಶೆಲ್ಲರ್

ಕೊಪ್ಪ: ಇಲ್ಲಿನ ತಾ. ವ್ಯ. ವ್ಯೂ. ಸ. ಸಿ. ಅಕ್ಕಿಗಿರಣಿಯಲ್ಲಿ ಈಚೆಗೆ ೩೫ ಸಾವಿರ ರೂ. ವೆಚ್ಚದಲ್ಲಿ 'ಪ್ರೀ ಕ್ಲೀನರ್' ಎಂಬ ಯಂತ್ರ ಒಂದನ್ನು ಅಳವಡಿಸಲಾಗಿದೆ. ಇದರಿಂದ ಸಂಪೂರ್ಣ ಸ್ವಚ್ಛವಾದ ಅತ್ಯುತ್ತಮವಾದ ಅಕ್ಕಿ ದೊರೆಯುತ್ತದೆ.

ಇದು ಭತ್ತದಲ್ಲಿರುವ ಕಾಯಿಕೆಟ್ಟು ಹುಲ್ಲುಬೀಜ, ಹುಲ್ಲು, ಕಲ್ಲು, ಮಣ್ಣು – ಈ ಎಲ್ಲವನ್ನೂ ಪ್ರತ್ಯೇಕಿಸುತ್ತದೆ.

ಅಕ್ಕಿಯ ಜೊತೆಗೆ ಮಣ್ಣು ಬಂದರೆ ಅಕ್ಕಿಯಲ್ಲಿರುವ ತೈಲಾಂಶದೊಂದಿಗೆ ಈ ಮಣ್ಣಿನ ಧೂಳು ಅಂಟಿ, ಅಕ್ಕಿಗೆ ಹೆಚ್ಚು ಪಾಲಿಶ್ ಬೇಕಾಗುತ್ತದೆ. ಆದರೆ ಇಲ್ಲಿ ಮಣ್ಣು ಬೇರೆಯಾಗುವುದರಿಂದ ಪಾಲಿಶ್ ಕಮ್ಮಿ ಸಾಕಾಗುತ್ತದೆ. ಅಕ್ಕಿಯ ಪೌಷ್ಟಿಕಾಂಶದ ದೃಷ್ಟಿಯಿಂದ ಇದೊಂದು ವರದಾನವೇ ಸರಿ.

ಅಕ್ಕಿಯ ಇಳುವರಿಯಲ್ಲಿ ವ್ಯತ್ಯಾಸವಾಗುವುದಿಲ್ಲ. ಕಲ್ಲು ಪೂರ್ತಿ ಬೇರೆಯಾಗುವುದರಿಂದ ಬಹಳವೆಂದರೆ ಕ್ವಿಂಟಾಲಿಗೆ ಅರ್ಧ ಕೇಜಿಯಷ್ಟು ಕಮ್ಮಿ ಬರಬಹುದು, ಅಷ್ಟೆ.

ರಬ್ಬರ್ ಶೆಲ್ಲರ್

ಎಲ್ಲಾ ಗಿರಣಿಗಳಲ್ಲೂ ರಬ್ಬರ್ ಶೆಲ್ಲರ್ ಅನ್ನು ಕಡ್ಡಾಯವಾಗಿ ಅಳವಡಿಸಬೇಕೆಂದು ಜಿಲ್ಲಾಧಿಕಾರಿಗಳು ಆಜ್ಞೆ ಮಾಡಿದ್ದರು. ಇದರಿಂದ ಅಕ್ಕಿಯಲ್ಲಿ ಒಡಕಲು (ನುಚ್ಚು) ಇಲ್ಲವಾಗಿ ಇಳುವರಿ ಅತ್ಯುತ್ತಮವಾಗಿರುತ್ತದೆ.

ಆದರೆ ಮಿಲ್ ಮಾಲೀಕರುಗಳು ತಮ್ಮ ಸಂಘದ ಮೂಲಕ ಈ ಆಜ್ಞೆಯ ವಿರುದ್ಧ ಕೋರ್ಟಿಗೆ ಹೋಗಿದ್ದಾರೆ. ಈ ಗಿರಣಿಯಲ್ಲಿ ಮಾತ್ರ ಸುಮಾರು ೧೫ ಸಾವಿರ ರೂ. ವೆಚ್ಚ

(೪ನೇ ಪುಟಕ್ಕೆ)

"...ಅಧ್ಯಕ್ಷ, ಉಪಾಧ್ಯಕ್ಷರು ಕೆಳಗಿಳಿಯಲಿ"

ಮಾನ್ಯರೆ,

...ಮ್ಮ ೨೮–೧೦–೮೪ರ ಪತ್ರಿಕೆಯಲ್ಲಿ ಕೊ... ಪುರಸಭೆ ಉಪಾಧ್ಯಕ್ಷರಿಗೆ ಸಂಬಂಧಿಸಿದ ...ದಿಯಲ್ಲಿ ಅಧ್ಯಕ್ಷ ಮಂಜುನಾಥ ಶೆಟ್ಟಿ, ...ನು ಅತಿಥಿಗಳ ಜೊತೆ ಮಾತಿನಲ್ಲಿ ತಲ್ಲೀನರಾಗಿದ್ದಾಗ ನಾರಾಯಣ ಭಟ್ ಬಂದು ...ಂಕ್ ಸಾಲಕ್ಕೆ ಜಾಮೀನು ಬೇಕೆಂದು ...ಳಿ ಒಂದು ಪತ್ರಕ್ಕೆ ಸಹಿ ಹಾಕಿಸಿಕೊಂಡ...ನು ಹೇಳಿಕೊಂಡಿದ್ದಾರಷ್ಟೆ.

ಆದರೆ ಆ ಪತ್ರ ಸಾಮಾನ್ಯವಾದ ಎಂಥ... ಒಂದು ಪತ್ರವಾಗಿರದೆ ಛಾಪಾ ಕಾಗ... ಮೇಲೆ ಬರೆದ ಪತ್ರವಾಗಿತ್ತೆಂದು ನಮ... ...ಳಿದು ಬಂದಿದೆ. ಒಬ್ಬ ಪುರಸಭಾಧ್ಯಕ್ಷ... ಒಂದು ಬ್ಯಾಂಕಿನ ಸಾಲದ ಅರ್ಜಿಗೂ ...ಪಾ ಕಾಗದದ ಮೇಲೆ ಬರೆದ ಪತ್ರಕ್ಕೂ ...ತ್ಯಾಸ ತಿಳಿಯುವುದಿಲ್ಲವೆ? ಅಷ್ಟೇ ಅಲ್ಲ, ...ೀ ತುರ್ತಿರಲಿ, ಒಂದು ಛಾಪಾ ಕಾಗ... ಮೇಲೆ ಬರೆದ ಪತ್ರಕ್ಕೆ ಸಹಿ ಹಾಕು...ಲೂ ಅದರಲ್ಲಿ ಏನು ಬರೆದಿದೆಯೆಂದು ...ರದಷ್ಟು ತಲ್ಲೀನತೆಯೆನ್ನುವುದಾದರೆ ... ಹತ್ತಿರ ಎಂಥೆಂಥವರು ಏನೇನಕ್ಕೆ ಹಾಕಿಸಿಕೊಳ್ಳುತ್ತಾರೋ. ಈಗಾಗಲೇ ...ಸಿಕೊಂಡಿದ್ದಾರೊ, ಯಾರ ಸ್ವತ್ತು ...ರ ಹೆಸರಿಗೆ ಮಾಡಿಸಿಕೊಳ್ಳುತ್ತಾರೋ ... ಭಯ ಸಹಜವಲ್ಲವೆ?

...ದೆಲ್ಲ ಕಪಟ ನಾಟಕ ಎಂದು ಯಾವ...ವಿಗಾದರೂ ಅರ್ಥವಾದೀತು. ಬ್ಯಾಂ...ಸಾಲಕ್ಕೆ ಆಧಾರ ಮಾಡಲು ನಾರಾ... ಭಟ್ಟರಿಗೆ ವಾಸದ ಮನೆ ಸ್ವಂತ ಹೆಸ...ಬೇಕಿತ್ತು. ಕನಿಷ್ಠ, ಹಾಗಂತ ಒಂದು ...ಬೇಕಿತ್ತು. ಅದನ್ನು, ತನಗೆ ಅಧ್ಯ...ಗಲು ಸಹಕರಿಸಿದ ಕೃತಜ್ಞತೆಯಲ್ಲಿ ... ಅನುಗೆ ದಯಪಾಲಿಸಿದರು. ಇದು ...ಗಿರುತ್ತೆಂದುಕೊಂಡಿದ್ದರು. ಗುಲ್ಲಾ... ಪ್ಲೇಟು ತಿರುಗಿಸಿದರು, ಅಷ್ಟೆ. ಹೀಗೆಂದು ಈಗ ಇಡೀ ಊರೇ ಹೇಳುತ್ತಿದೆ.

ಈಗ ಈ ಇಬ್ಬರೂ ಮೊಟ್ಟ ಮೊದಲು ಮಾಡಬೇಕಾದ ಕನಿಷ್ಠ ಉಪಕಾರವೆಂದರೆ, ತಮ್ಮ ತಮ್ಮ ಪದವಿಗಳನ್ನು ಬಿಡುವುದು. ಆಗಲೂ ಇವರುಗಳು ಇಂಥ ಕೆಲಸಗಳನ್ನು ಮುಂದುವರಿಸಿಯಾರಾದರೂ ಅದರ ಫಲಿತಾಂಶವನ್ನು ಇಡೀ ಊರು ಹೊರಬೇಕಾಗುವ ಅನಿವಾರ್ಯವಿರುವುದಿಲ್ಲ. ಈ ವಿಷಯದಲ್ಲಿ ಕೊಪ್ಪದ ಜನತೆಯಲ್ಲಿ ಭಿನ್ನಾಭಿಪ್ರಾಯವಿರಲಾರದು.

—ನಾಗರೀಕರು,
ಮೇಲಿನ ಪೇಟೆ, ಕೊಪ್ಪ.

ಮನೆಹಾಳು ಕೆಲಸ !

ಮಾನ್ಯರೆ,

ಚಿಕ್ಕಮಗಳೂರು ಜಿಲ್ಲೆಯ ಮಾಗುಂಡಿಯಲ್ಲಿ ಭದ್ರಾ ನದಿಗೂ, ಆಗುಂಬೆ ಸಮೀಪ ಮಾಲತಿ ನದಿಗೂ ಅಣೆಕಟ್ಟುಗಳನ್ನು ಕಟ್ಟುವ ಸರ್ಕಾರದ ಯೋಜನೆಯನ್ನು ಮನೆಹಾಳು ಕೆಲಸವೆಂದರೆ ಅತಿಶಯೋಕ್ತಿಯಲ್ಲ. ಕರ್ನಾಟಕದ ಆರ್ಥಿಕ ವ್ಯವಸ್ಥೆಯಲ್ಲಿ ಮಲೆನಾಡಿಗೂ ಒಂದು ಹಿರಿಯ ಪಾತ್ರವಿದೆ. ಇಂಥದನ್ನು ಮುಳುಗಿಸಿ, ಇದೇ ಸಂಪತ್ತನ್ನು ಚಿತ್ರದುರ್ಗದಲ್ಲೋ ಧಾರವಾಡದಲ್ಲೋ ಬೆಳೆಯುತ್ತೇವೆನ್ನುವುದು ಕಾರ್ಯಸಾಧ್ಯವಲ್ಲದ ಹುಚ್ಚು ಮಾತು. (೪ನೇ ಪುಟಕ್ಕೆ)

ಮುಳುಗಡೆಯಾಗುತ್ತಿರುವ ಮಲೆನಾಡು : ಈಗಲೇ ಎಚ್ಚರಗೊಳ್ಳದಿದ್ದರೆ ನೆಲೆಗೇಡು

ಮಾನ್ಯರೆ,

ಶೃಂಗೇರಿ, ಕೊಪ್ಪ, ತೀರ್ಥಹಳ್ಳಿ ತಾ||ಗಳ ಕೆಲವು ಪ್ರದೇಶಗಳನ್ನು ಜಲಾವೃತಗೊಳಿಸುವ ಒಂದು ಅಣೆಕಟ್ಟನ್ನು ತೀರ್ಥಹಳ್ಳಿ ತಾಲ್ಲೂಕಿನ ಭೀಮನಕಟ್ಟೆ ಎನ್ನುವಲ್ಲಿ ಕಟ್ಟಲಾಗುವುದು. ಸರ್ಕಾರದ ಈ ಕ್ರಮದಿಂದ ಮಲೆನಾಡು ಕತ್ತಲಲ್ಲಿ ಮುಳಗಿದಂತಾಗುವುದು. ಇದನ್ನು ಮಲೆನಾಡಿನ ಜನತೆ ಸಹಿಸುವುದು ಷಂಡತನವಾಗುತ್ತದೆ.

ಈ ದೃಷ್ಟಿಯಿಂದ ಈ ಹಿಂದೆ 'ಮುಂಜಾವು' ಪತ್ರಿಕೆಯಲ್ಲಿ ಭದ್ರಾ ಮೇಲಂಡೆ ಯೋಜನೆಯ ದುಷ್ಪರಿಣಾಮಗಳ ಬಗ್ಗೆ ವಿಷಯ ಪ್ರಕಟವಾಗಿರುವುದು ಒಂದು ಆಶಾದಾಯಕ ಬೆಳವಣಿಗೆ.

ಮಾಲತಿ ಯೋಜನೆಯನ್ನು ತೀರ್ಥಹಳ್ಳಿ ಮತ್ತು ಶೃಂಗೇರಿ ತಾ||ಗಳ ಜನತೆ ಪ್ರಬಲವಾಗಿ ವಿರೋಧಿಸಬೇಕು. ಇದಕ್ಕೆ ಕೊಪ್ಪ ತಾ||ನವರ ಸಹಕಾರವನ್ನೂ ಪಡೆಯಬಹುದು. ಈ ಉದ್ದೇಶಕ್ಕಾಗಿ ಬಲಿದಾನಕ್ಕೂ ಸಿದ್ಧರಾಗಬೇಕು. ಸರಕಾರ ಕೊಡುವ ಪರಿಹಾರದ ಆಮಿಷಕ್ಕೆ ಬಲಿಯಾದಲ್ಲಿ ನೆಲೆಯಿಲ್ಲದೆ ಅಂತರಪಿಶಾಚಿಗಳಂತಾಗಬೇಕಾದೀತು. ಜನ ಈಗಲೇ ಎಚ್ಚರಗೊಳ್ಳದಿದ್ದಲ್ಲಿ ಅಪಾರ ನಷ್ಟ ಹಾಗೂ ಮನೋನೆಮ್ಮದಿಯ ಅಸ್ಥಿರತೆಯನ್ನು ಎದುರಿಸಬೇಕಾಗುವುದು.

ಜನ ಸಂಘಟಿತರಾಗವುದೇ ಅಲ್ಲದೆ ತಮ್ಮ ತಮ್ಮ ಕ್ಷೇತ್ರದ ಶಾಸಕರುಗಳಿಗೆ ತಮ್ಮ ಏಕಮುಖ ಬೆಂಬಲ ಸೂಚಿಸಿ ಈ ನಿಟ್ಟಿನಲ್ಲಿ ಕಾರ್ಯಮಗ್ನರಾಗುವಂತೆ ಹಾಗೂ ಮತದಾರ ಜನತೆಯ ಮುಖಂಡತ್ವ ವಹಿಸಿ ಈ ದಿಕ್ಕಿನಲ್ಲಿ ಗೆಲುವು ಪಡೆಯಲು ಶ್ರಮಿಸುವಂತೆ ಒತ್ತಾಯಿಸಬೇಕು.

ಕ್ಷೇತ್ರದ ಪ್ರತಿನಿಧಿಗಳು ಸರ್ಕಾರದ ಪರವಾದಿಸುವುದಾದಲ್ಲಿ ಜನ ಕೈಗೊಳ್ಳಬೇಕಾದ ಬೇರೆ ಮಾರ್ಗಗಳನ್ನು ಯೋಚಿಸಿ ಕಾರ್ಯಚುರುಕುಗೊಳಿಸುವುದು ಅಗತ್ಯ.

—ಮಿಗಾ ಜಗದೀಶ್.

ಮೊಲಿಕ್ಯುಲರ್ ಸ್ಪಾಂಜ್

(೨ನೇ ಪುಟದಿಂದ)

ಇದರ ಎರಡೇ ಎರಡು ಸಣ್ಣ ತೊಂದರೆಗಳೆಂದರೆ, ೧) ಬಿದ್ದು ಹೋಗುವ ಸಾಧ್ಯತೆ ಮತ್ತು ೨) ಇದಕ್ಕೆ ಹಚ್ಚಿರುವ ಅಂಟುವ ಪದಾರ್ಥದಿಂದ ಚರ್ಮಕ್ಕೆ 'ಅಲರ್ಜಿ' ಆಗುವ ಸಾಧ್ಯತೆ ಮಾತ್ರ.

ಮಣ್ಣೇ ಇಲ್ಲದೆ ಬೆಳೆ

(೨ನೇ ಪುಟದಿಂದ)

ಳನ್ನು 'ವಿನೈಲ್' ಹಾಳೆಗೆ ತಗುಲಿಸಿ, ನೀರಿನ ತೊಟ್ಟಿಗೆ ಹಾಕಬೇಕು. ಈ ತೊಟ್ಟಿಯಲ್ಲಿ ನೀರು ಮತ್ತು ರಸಗೊಬ್ಬರದ ಮಿಶ್ರಣ ಸತತವಾಗಿ ಸಮ ಪ್ರಮಾಣದಲ್ಲಿ ಇರಬೇಕು. ಮಣ್ಣು ಇಲ್ಲದೆ ಬೀಜಗಳು ಮೊಳೆಯುತ್ತವೆ. ಜಾಲರಿಯ ಮೇಲೆ ಗಿಡ ಹಬ್ಬಿಕೊಳ್ಳುತ್ತದೆ.

ಹಿಗೆವ್ಹೊ ಕಳೆದ ವರ್ಷ ಹೀಗೆ ಬೆಳೆಸಿದ ಟೊಮೆಟೋ ಗಿಡ ಈಗ ೯ ಚದರ ಮೀಟರ್ ವ್ಯಾಪ್ತಿಯ ಜಾಲರಿಯಲ್ಲಿ ದಟ್ಟವಾಗಿ ಹಬ್ಬಿದೆ. ಗಿಡ ಬೆಳೆದಷ್ಟೂ ಹೆಚ್ಚು ಹೆಚ್ಚು ಹಣ್ಣು ಬಿಡುತ್ತಿದೆ. ಈವರೆಗೆ ಅದರಲ್ಲಿ ೧೨ ಸಾವಿರ ಹಣ್ಣು ಎಣಿಸಿದ್ದಾರೆ ಹಿಗೆವ್ಹೊ. ಒಂದು ಗಿಡದಲ್ಲಿ ೯೦ ಕಿಲೋದ ಹಣ್ಣು, ... ಅಧಿಕ ಇಳುವರಿಯ ಕಬ್ಬಿನ ಜಲ್ಲೆ—ಮುಂತಾದವು ಅವರ ಇನ್ನಿತರ ಸಾಧನೆಗಳು. (ಸಾಧಾರ)

ಇಂದಿರಾ ಹತ್ಯೆ ಮತ್ತು ಅನಂತರ....

(ಮೊದಲ ಪುಟದಿಂದ)

ಆದರೆ ಸಿಖ್ಖರ ಸಮಸ್ಯೆ ಅರ್ಥವಾಗಬೇಕಾದರೆ 'ಗಣರಾಜ್ಯ' ವ್ಯವಸ್ಥೆ 'ವಿಕೇಂದ್ರೀಕರಣ'ದ ತತ್ವಗಳನ್ನು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ವಿದೇಶ ನೀತಿ ಮತ್ತು ರಕ್ಷಣೆ – ಈ ಎರಡು ವಿಷಯಗಳು ಮಾತ್ರ ಪೂರ್ತಿ ಕೇಂದ್ರ ಸರ್ಕಾರದ ಅಧೀನದಲ್ಲಿದ್ದು, ಉಳಿದೆಲ್ಲ ಆಂತರಿಕ ವಿಷಯಗಳಲ್ಲಿ ರಾಜ್ಯಗಳು ಸಂವಿಧಾನದ ಮಾರ್ಗದರ್ಶನದಂತೆ ನೀತಿ ರೂಪಿಸಿ ಆಡಳಿತ ನಡೆಸಲು ಸ್ವತಂತ್ರವಾಗಿರಬೇಕು–ಇದು ಸ್ಥೂಲವಾಗಿ 'ಗಣರಾಜ್ಯ' ವ್ಯವಸ್ಥೆಯ ತಿರುಳು. ಇದರಿಂದ ರಾಜ್ಯಗಳ ಸರ್ವತೋಮುಖ ಅಭಿವೃದ್ಧಿ ಚುರುಕಾಗುತ್ತದೆ, ರಾಜ್ಯ – ರಾಜ್ಯಗಳ ನಡುವೆ ತಾರತಮ್ಯ ಕಮ್ಮಿಯಾಗುತ್ತದೆ, ಪ್ರತಿಯೊಂದಕ್ಕೂ ರಾಜ್ಯಗಳು ಕೇಂದ್ರ ಸರ್ಕಾರವನ್ನು ಬೇಡುವ ಅಗತ್ಯ ತಪ್ಪುತ್ತದೆ. ಕೇಂದ್ರ ಸರ್ಕಾರ ಎಲ್ಲ ರಾಜ್ಯಗಳ ನಡುವೆ ಸಮನ್ವಯದ ಬೆಸುಗೆಯಾಗಿ ಮಾರ್ಗದರ್ಶಕವಾಗಿ ಮಾತ್ರ ಕೆಲಸಮಾಡುತ್ತದೆ.

ಇಂಥ ವಿಕೇಂದ್ರೀಕರಣದ ಬೇಡಿಕೆ ಈಗ ಎಲ್ಲರಾಜ್ಯಗಳಲ್ಲೂ ಹಬ್ಬಿದೆ, ಹಬ್ಬುತ್ತಿದೆ. ಇದೇ ಮೂಲತಃ ಸಿಖ್ಖರ ಬೇಡಿಕೆಯೂ ಆಗಿದ್ದುದು. (ಕೆಲವೇ ಮಂದಿ ಸ್ವಾರ್ಥಿ ಮುಂದಾಳುಗಳು ಮಾತ್ರ ಪ್ರತ್ಯೇಕ 'ದೇಶ'ದ ಮಾತನಾಡಿದ್ದರು.)

ಆದರೆ ಈ ಪ್ರಜಾಪ್ರಭುತ್ವಾತ್ಮಕ ಬೇಡಿಕೆಯನ್ನು ಈಡೇರಿಸಲು ಒಪ್ಪದ ನಮ್ಮ ದೇಶದ ಆಳುವ ವರ್ಗ ಅದನ್ನು 'ಪ್ರತ್ಯೇಕತಾವಾದ'ವೆಂದು ಹೆಸರಿಸಿ, ಜನರ ಚಳುವಳಿಯನ್ನು ಹತ್ತಿಕ್ಕಲು ಹೊರಟಾಗ, ಮೂಲತಃ ಶೂರರೂ, ಸ್ವಾಭಿಮಾನಿಗಳೂ ಆದ ಸಿಖ್ಖರು ಕ್ರುದ್ಧರಾದರು. ಜೊತೆಗೆ ಅನಕ್ಷರತೆ, ಮೌಢ್ಯ ಹಾಗೂ 'ಧಾರ್ಮಿಕ ಅತಿ ಪ್ರೇಮ' (ರಿಲಿಜಿಯಸ್ ಫ್ಯಾನೆಟಿಸಿಸಂ)ಗಳಿಂದ ಹುಂಬರಾಗಿಯೇ ಉಳಿದಿರುವ ಸಿಖ್ಖರಲ್ಲಿ ಪ್ರತ್ಯೇಕತಾವಾದಿಗಳು ತಮ್ಮ ಪ್ರಭಾವ ಬೀರಲು ಕಾರಣವಾಯಿತು. ವಿಕೇಂದ್ರೀಕರಣದತ್ತ ಕೆಲಸ ಮಾಡುವುದು ಇದಕ್ಕೆ ಪರಿಹಾರವಾಗಬಹುದಿತ್ತೇ ಹೊರತು, ಸೈನಿಕ ದಬ್ಬಾಳಿಕೆ, ದಮನಗಳಲ್ಲ.

ಈ ಹಿನ್ನೆಲೆಯಲ್ಲಿ ನಿರಪರಾಧಿ ಸಿಖ್ಖರ ಮೇಲಿನ ಹಿಂಸೆ ಕೂಡ ತೀವ್ರ ಖಂಡನೀಯವಾದುದಾಗಿದೆ.

—ಸಂಪಾದಕ.

ಮನೆಹಾಳು ಕೆಲಸ!

(೩ನೇ ಪುಟದಿಂದ)

ಈಗಾಗಲೇ ಬಹಳಷ್ಟು ನಾಶವಾಗಿರುವ ಮಲೆನಾಡನ್ನು ನಿರ್ನಾಮ ಮಾಡಿ ನಮ್ಮನ್ನು ನೆಲೆಗೇಡಿ ನಿರ್ಗತಿಕರನ್ನಾಗಿ ಮಾಡುವುದು ಅಕ್ಷಮ್ಯ. "ಚಿತ್ರದುರ್ಗದಂಥ ಹತ್ತು ಬೆಂಗಾಡಿನ ಜಿಲ್ಲೆಗಳು ಸಿಗಬಹುದು, ಆದರೆ ಒಂದು ಸಮೃದ್ಧ ಮಲೆನಾಡು ಸಿಗಲಾರದು" ಸರ್ಕಾರದ ಈ ಭಂಡ ಕೆಲಸವನ್ನು ಒಕ್ಕೊರಲಿನಿಂದ ವಿರೋಧಿಸೋಣ.

—ರಮೇಶ್ ಎಸ್ವಿ, ಬೇಗಾರು.

ಪುಂಡಾಟಿಕೆಗೆ ಪೆಟ್ಟು ತಿಂದ 'ಪುಂಡ'

ಕೊಪ್ಪ: ಬಾಳಗಡಿಯ ನಾರಾಯಣ ಶೆಟ್ಟಿ ಎಂಬವರಿಗೆ 'ಕತ್ತಿಯಿಂದ ಕೈ ಕಡಿಯುವ' ಬೆದರಿಕೆ ಹಾಕಿದ ದೂರಿನ ಮೇಲೆ ಪೋಲೀಸರು ಇಲ್ಲಿನ ಪ್ರಮುಖ ವ್ಯಾಪಾರಿ ಯು ಆರ್. ಭಾಸ್ಕರ ರಾವ್ ಅವರ ಮಗ ಸೂರ್ಯನಾರಾಯಣ ಎಂಬವನನ್ನು ಹುಡುಕುತ್ತಿದ್ದಾರೆ. 'ಆತ ತಲೆ ತಪ್ಪಿಸಿಕೊಂಡು ತಿರುಗುತ್ತಿದ್ದಾನೆ'ನ್ನಲಾಗಿದ್ದು, ಪ್ರಕರಣಕ್ಕೆ ಬಳಸಿದ್ದೆನ್ನಲಾದ ಆತನ ಕಾರನ್ನು (ಸಿಎಎ ೨೩೨೩) ವಶಪಡಿಸಿಕೊಂಡಿದ್ದಾರೆ. ಆತನ ತಮ್ಮ ರಮೇಶ್ ಮತ್ತು ಕಾರಿನ ಡ್ರೈವರನ್ನು ಬಂಧಿಸಿ ಜಾಮೀನಿನ ಮೇಲೆ ಬಿಡಲಾಗಿದೆ.

ಹರಯದ ಹೆಣ್ಣು ಮಕ್ಕಳನ್ನು ಮರುಳು ಮಾಡಿಯೋ ಪುಸಲಾಯಿಸಿಯೋ ಈತ ಕರೆದೊಯ್ಯುತ್ತಿದ್ದನೆಂದೂ, ಈ ಕೆಲಸಕ್ಕೆ ತಮ್ಮ ಕಾರು, ಲಾರಿಗಳ ನೌಕರರನ್ನೂ ಬಳಸಿಕೊಳ್ಳುತ್ತಿದ್ದನೆಂದೂ ಹೇಳಲಾಗಿದೆ. ಇವನ ಇಂಥ 'ಚಟುವಟಿಕೆ'ಗಳಿಂದ ರೋಸಿದ್ದ ಕೆಲವರು ಸಮಯಕ್ಕಾಗಿ ಕಾಯುತ್ತಿದ್ದು, ಅ. ೨೦ರ ರಾತ್ರಿ ಬಾಳಗಡಿಯ ನಾರಾಯಣ ಶೆಟ್ಟರ ಮನೆಯಲ್ಲಿ ಈತ ಇಂಥದೇ ಪ್ರಯತ್ನದಲ್ಲಿದ್ದಾಗ ಅವನ ಮೇಲೆರಗಿದ ಅವರೆಲ್ಲ ಕತ್ತಲಲ್ಲಿ ಆತನಿಗೂ ಆತನ ಕಾರು ಚಾಲಕನಿಗೂ ಚೆನ್ನಾಗಿ ಥಳಿಸಿದರೆನ್ನಲಾಗಿದೆ.

ಇದಕ್ಕೆ ಪ್ರತೀಕಾರವಾಗಿ ಈತ ತನ್ನವರೊಂದಿಗೆ ಅ. ೨೮ ರ ರಾತ್ರಿ ನಾರಾಯಣ ಶೆಟ್ಟರ ಮನೆಗೆ ಹೋಗಿ ಕೈ ಕಡಿಯುವ ಬೆದರಿಕೆ ಹಾಕಿದನೆನ್ನಲಾಗಿದೆ.

ಕೆಲವು ಮರ್ಯಾದಸ್ಥರ ಮನೆಯ ಹೆಣ್ಣು ಮಕ್ಕಳೂ ಸಹ ಇಂಥವರ ಪುಸ್ಕಳವಾದ 'ಮನರಂಜನೆ'ಗೆ ಹಾತೊರೆಯುವುದು ಇವರುಗಳ ಪುಂಡಾಟಿಕೆ ಮತ್ತಷ್ಟು ಹೆಚ್ಚಲು ಕಾರಣವಾಗುತ್ತಿದೆ ಎಂಬುದೂ ಒಂದು ಕಹಿ ಸತ್ಯ.

ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆ

ಕೊಪ್ಪ: ಇಲ್ಲಿನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮತ್ತು ಲಯನ್ಸ್ ಕ್ಲಬ್‌ಗಳ ಸಂಯುಕ್ತ ಆಶ್ರಯದಲ್ಲಿ ಮಕ್ಕಳ ದಿನಾಚರಣೆಯಂದು ೪ರಿಂದ ೮ ವರ್ಷದೊಳಗಿನ ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆ ನ[illegible]ಯುತ್ತದೆ. ಶೃಂಗೇರಿ ಧನ್ವಂತರಿ ಆಸ್ಪತ್ರೆಯ ಮಕ್ಕಳ ತಜ್ಞ ಡಾ॥ ಸುಬ್ಬಲಕ್ಷ್ಮಿ ಎಂ.ಡಿ., ಡಿ.ಸಿ.ಹೆಚ್. ಹಾಗೂ ಕೊಪ್ಪ[illegible]ದಂತ ವೈದ್ಯರಾದ ಡಾ॥ ಎ. ಎಸ್. ಎ[illegible] ರಾವ್ ಅವರುಗಳಿಂದ ಮಕ್ಕಳ ಉಚಿ[illegible] ವೈದ್ಯಕೀಯ ಶಿಬಿರವೂ; ಆರೋಗ್ಯವಂ[illegible] ಮಕ್ಕಳ ಪ್ರದರ್ಶನವೂ ನಡೆಯುತ್ತ[illegible] ಶಿಬಿರದಲ್ಲಿ ಮಕ್ಕಳಿಗೆ ಔಷಧಿಗಳನ್ನು ಪುಕ್ಕ[illegible]ಯಾಗಿ ನೀಡಲಾಗುತ್ತದೆ.

ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಾಗಿ ಕೋ[illegible]ರಲಾಗಿದೆ.

ಪ್ರೀಕ್ಲೀನರ್ ಇರುವ ಅಕ್ಕಿ ಗಿರಣಿ

(೩ನೇ ಪುಟದಿಂದ)

ದಲ್ಲಿ ಇದನ್ನು ಅಳವಡಿಸಲಾಗಿದೆ. ೨೦೦ ಕ್ವಿಂಟಾಲ್ ಅಥವಾ ೨೦ ದಿನಕ್ಕೊಮ್ಮೆ ಅದರ ರಬ್ಬರನ್ನು ಬದಲಿಸಬೇಕಾಗುತ್ತದೆ. ಅದರ ಖರ್ಚು ೧೦೦೦ ರೂ. ನಷ್ಟಾಗುತ್ತದೆ.

ಕೆಲವು ವ್ಯಾಪಾರಿಗಳ ದುರಾಸೆ !

ಈ ಗಿರಣಿಯಲ್ಲಿ ಇಷ್ಟೆಲ್ಲ ಸೌಕರ್ಯ ಅಳವಡಿಸಿದ್ದರೂ ಇಲ್ಲಿ ಮಿಲ್ ಬಾಡಿಗೆ ಬೇರೆಡೆಗಳಿಗಿಂತಲೂ ಒಂದು ರೂ. ಕಡಿಮೆಯೇ– ೬ ರೂ. ಮಾತ್ರ. ಅದರ ಮೇಲೆ, ಉಮಿಯನ್ನು ಇಲ್ಲೇ ಬಿಟ್ಟರೆ ಇನ್ನೂ ೭೫ ಪೈಸೆ ಕಮ್ಮಿ ಹೀಗಾಗಿ. ಪೇಟೆಯ ಮತ್ತು ಸುತ್ತಮುತ್ತಲ ವ್ಯಾಪಾರಿಗಳೆಲ್ಲ – ರೈತರಿಗೂ ತೊಂದರೆ ಮಾಡಿ – ಇಲ್ಲಿಗೆ ಮುತ್ತುವುದ[illegible] ಈಗಾಗಲೇ ಕುಖ್ಯಾತ.

ಇಷ್ಟರ ಮೇಲೂ ಕೆಲವು ವ್ಯಾಪಾ[illegible]ಗಳು ತಮ್ಮ ಅಕ್ಕಿ ಮಾಡಿಸುವಾಗ ಪ್ರಿ[illegible]ಕ್ಲೀನರ್ ಬಳಸುವುದು ಬೇಡವೆನ್ನುತ್ತಾ[illegible]ರಂತೆ. ಕಿಲುಬು ಕಾಸಿನ ಖರ್ಚಿಲ್ಲದೆ ಜ[illegible]ರಿಗೆ ಅತ್ಯುತ್ತಮ ಅಕ್ಕಿ ಒದಗಿಸುವ ಸೌಲಭ್[illegible]ವಿದ್ದರೂ ಕಲ್ಲು, ಮಣ್ಣು ಎಲ್ಲ ಸೇರಿಸಿ ಇವರ[illegible] ಅರ್ಧ ಕೇಜಿ ಹೆಚ್ಚು ಪಡೆಯಬೇಕು!

ವ್ಯಾಪಾರದ ದುರಾಶೆಗೆ ಯಾವ ಮಿ[illegible]ಯೂ ಇಲ್ಲವೆ?

ಕಿಗ್ಗ ದೇವಸ್ಥಾನದಲ್ಲಿ ಮಹಾರುದ್ರ ಹೋಮ

ಕಿಗ್ಗ: ಇಲ್ಲಿನ ಸುಪ್ರಸಿದ್ಧ ಋಷ್ಯಶೃಂಗೇಶ್ವರ ದೇವಸ್ಥಾನದಲ್ಲಿ ಪ್ರತಿ ವರ್ಷದಂ[illegible] ಚಂಡಿಕಾ ಹವನ, ಮಹಾರುದ್ರಹೋಮ[illegible] ಮುಂತಾದ ಕಾರ್ಯಕ್ರಮಗಳು ನ.೧೨ರಂದ[illegible] ನಡೆಯಲಿದ್ದು, ಈ ಬಗ್ಗೆ ಸಾರ್ವಜನಿಕರಿಂ[illegible] ಎಲ್ಲ ರೀತಿಯ ಸಹಕಾರವನ್ನು ಸೇವಾ ಸಮಿತಿಯವರು ಕೋರಿದ್ದಾರೆ.

ಇಂದಿರಾ ಅಂತ್ಯಕ್ರಿಯೆ: ಟಿ.ವಿ.ಯಲ್ಲಿ ವೀಕ್ಷಣೆ

ಕೊಪ್ಪ: ಇಂದಿರಾ ಗಾಂಧಿಯವರ ಅಂತ್ಯ ಕ್ರಿಯೆಯ ದೂರದರ್ಶನ ಪ್ರಸಾರವನ್ನು ಇಲ್ಲಿನ ೩ ದೂರದರ್ಶನ ಸೆಟ್‌ಗಳ[illegible] ನೂರಾರು ಜನ ವೀಕ್ಷಿಸಿದರು.

ಎಲಿಯಾಸ್ ಡಯಾಸ್, ಪಿ. ಎ. ಶ್ರೀನಿವಾಸ್, ಕೆ.ವಿ.ಮಂಜುನಾಥ ಶೆಟ್ಟಿ ಅವ[illegible]ಗಳು ತಮ್ಮ ಟಿ. ವಿ. ಗಳಲ್ಲಿ ಈ ಪ್ರಸಾರವನ್ನು ನೋಡಲು ಸಾರ್ವಜನಿಕರಿಗೆ [illegible]ಕಾಶ ಕಲ್ಪಿಸಿದ್ದರು.

ಕೊಪ್ಪ ತಾ॥ ದರ್ಖಾಸ್ತು ಸಮಿತಿ ಕಾರುಬಾರು:

ಮದ್ರಾಸುವಾಸಿ ನೆಂಟರಿಗೂ ಭೂಮಿ!

ಕೊಪ್ಪ: ಈ ತಾಲ್ಲೂಕಿನ ದರ್ಖಾಸ್ತು ವಿಲೇವಾರಿಯಲ್ಲಿ ವ್ಯಾಪಕವಾಗಿ ಅಕ್ರಮ, ಅನ್ಯಾಯ ನಡೆಯುತ್ತಿರುವ ದೂರುಗಳು ಬರುತ್ತಿವೆ.

ಈಚೆಗಷ್ಟೇ ಬೊಮ್ಲಾಪುರ ಪಂಚಾಯ್ತಿ ವ್ಯಾಪ್ತಿಯಲ್ಲಿ ನಡೆದ ಇಂಥ ಅನ್ಯಾಯಗಳನ್ನು ವಿರೋಧಿಸಿ ಅಲ್ಲಿನ ಹರಿಜನರು ಮತ್ತಿತರ ದರ್ಖಾಸ್ತುದಾರರು ಧರಣಿ ನಡೆಸಿದ್ದನ್ನು ವರದಿ ಮಾಡಿದ್ದೆವು('ಮುಂಜಾವು'–ಸೆ.೩೦) ಆಗ ಆ ವಿಲೇವಾರಿಯನ್ನು ತಡೆ ಹಿಡಿದಿದ್ದ ತಹಸೀಲ್ದಾರರು, ದಾಖಲೆಗಳ ಪರಿಶೀಲನೆಯ ನಂತರ ಸಂಬಂಧಿತರಿಗೆ ನ್ಯಾಯ ದೊರಕಿಸಿಕೊಟ್ಟರೆಂದು ಈಚಿನ ವರದಿ ತಿಳಿಸಿದೆ.

ಆದರೆ ಅದೇ ಗ್ರಾಮದಲ್ಲಿ ಪುನಃ ಇನ್ನೊಂದು ಅನ್ಯಾಯ ನಡೆದಿರುವ ದೂರು ಬಂದಿದೆ.

ಆ ಗ್ರಾಮದವರಾದ ದರ್ಖಾಸ್ತು ಸಮಿತಿ ಸದಸ್ಯ ಕೋಣೆಗದ್ದೆ ಪದ್ಮನಾಭರ ನೆಂಟರೊ[illegible]ರು ಮದ್ರಾಸಿನಲ್ಲಿ ವಾಸವಾಗಿದ್ದು, ಅವ[illegible] [illegible]ಲಾಪುರ ಗ್ರಾಮದ ಸ. ನಂ. ೮೫ರಲ್ಲಿ ಭೂಮಿ ಮಂಜೂರಾತಿಗೆ ಶಿಫಾರ್ಸು ಮಾಡಿದೆಯೆಂದು ದೂರಲಾಗಿದೆ. ಆ ಗ್ರಾಮದಲ್ಲಿ ೨೭ ಜನ ಭೂ ರಹಿತರಿದ್ದು ಹೆಚ್ಚಿನವರು ದರ್ಖಾಸ್ತು ಕೇಳಿರುವವರು. ಅವರನ್ನೆಲ್ಲ ಕಡೆಗಣಿಸಿ ಈ ಶಿಫಾರ್ಸು ಮಾಡಿರುವುದಾಗಿ ಹೇಳಲಾಗಿದೆ.

ಇದೇ ರೀತಿ ಗ್ರಾಮಲೆಕ್ಕಿಗರೊಬ್ಬರ ಸಂಬಂಧಿಕರು ಮಣಿಪಾಲದಲ್ಲಿ ಹೋಟೆಲ್ ನಡೆಸುತ್ತಿದ್ದು, ಅವರಿಗೆ ಈ ತಾ॥ನಲ್ಲಿ ಭೂಮಿ ನೀಡಲಾಗಿದೆಯೆಂದು ಶಾಸಕರಿಗೂ ತಹಸೀಲ್ದಾರರಿಗೂ ಭೂ ರಹಿತ ದರ್ಖಾಸ್ತುದಾರರಿಂದ ದೂರು ಬಂದಿವೆ.

ತಾ॥ ರೈತ ಸಂಘದ ಅಧ್ಯಕ್ಷ ಗುಣವಂತಿ ಪರಮೇಶ್ವರ ವಿಪುಲ ಆಸ್ತಿ ಹೊಂದಿರುವ ತಂದೆಗೆ ಒಬ್ಬನೇ ಮಗ. (ಇದ್ದುದನ್ನೇ ಸರಿಯಾಗಿ ಬೇಸಾಯ ಮಾಡುವುದಿಲ್ಲವೆಂದು ಅವರ ಗೆಳೆಯರ ಪುಕಾರಿದೆ.) ಅವರಿಗೂ ಬೇರೊಂದು ಗ್ರಾಮದಲ್ಲಿ ೨೦ ಎಕರೆ ಭೂಮಿ ಶಿಫಾರ್ಸು ಮಾಡಿರುವುದಾಗಿ ತಿಳಿದುಬಂದಿದೆ ಇಂಥವು ಒಂದೆರಡಲ್ಲ, ಹೇರಳವಾಗಿ ನಡೆದಿರುವುದಾಗಿ ಹೇಳಲಾಗುತ್ತಿದೆ. ಈರೀತಿಯ ಅನ್ಯಾಯಗಳ ಬಗ್ಗೆ ಶಾಸಕರಿಗೂ ತಹಸೀಲ್ದಾರರಿಗೂ ದಿನಂಪ್ರತಿ ದೂರುಗಳು ಬರುತ್ತಿವೆ.

ಮೊದಲು ಹರಿಜನ–ಗಿರಿಜನರಿಗೆ, ಮತ್ತೆ ಇತರ ಭೂ ರಹಿತ ದರ್ಖಾಸ್ತುದಾರರಿಗೆ, ಭೂಮಿ ಹಂಚಿಕೆ ಈ ಸರ್ಕಾರದ್ದೂ ನೀತಿ–ಗುರಿ ಆಗಿದ್ದಲ್ಲಿ ಮೊದಲು ಈ ಅನ್ಯಾಯಗಳೆಲ್ಲ ನಿಲ್ಲಬೇಕು. ಜಮೀನು ಹಂಚಿಕೆಯಲ್ಲಿ ಅಕ್ರಮಗಳಾದರೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿಕೆ ಕೊಟ್ಟಿರುವ **ಜಿಲ್ಲಾಧಿಕಾರಿಗಳು ಇಂಥ ಪ್ರಕರಣಗಳನ್ನು ಪತ್ತೆ ಹಚ್ಚಲು ತೀವ್ರ ಕ್ರಮ ತೆಗೆದುಕೊಳ್ಳಬೇಕು.**

(ಈ ಬಗ್ಗೆ ಇನ್ನಷ್ಟು ವಿವರಗಳನ್ನು ಸಂಗ್ರಹಿಸುತ್ತಿದ್ದೇವೆ. ಓದುಗರೂ ಖಚಿತ ಮಾಹಿತಿಗಳನ್ನೊದಗಿಸಿದರೆ ಉಪಯುಕ್ತ.

—ಸಂ.)

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಶಿವಮನೆ ನಾಗರಾಜ್, ಅಚ್ಚು: ದೀಪಿಕಾ ಅಚ್ಚುಕೂಟ, ಕೊಪ್ಪ. ಶೃಂಗೇರಿ ಪ್ರತಿನಿಧಿ: ಕಲ್ಕುಳಿ ವಿಠಲ ಹೆಗ್ಡೆ